ಅ) ನೆಲಮಂಗಲ ಮತ್ತು ಕೊರಟಗೆರೆ ತಾಲ್ಲೂಕುಗಳಲ್ಲಿ ಒಟ್ಟು ಎಷ್ಟು ಕಿ.ಮೀ. ಲೋಕೋಪಯೋಗಿ ರಸ್ತೆಗಳಿವೆ; (ತಾಲ್ಲೂಕುವಾರು ವಿವರ ಕೊಡುವುದು);

ಆ) ಇವುಗಳ ಪೈಕಿ ಎಷ್ಟು ಕಿ.ಮೀ.ಗಳಲ್ಲಿ ಬಸ್ಸು ಸಂಚಾರ ಮಾಡಲು ಯೋಗ್ಯವಾಗಿದೆ;

ಇ) ಉಳಿದ ಕಿ.ಮೀ.ಗಳಲ್ಲಿ ಶೀಘ್ರದಲ್ಲಿ ರಸ್ತೆ ದುರಸ್ತಿ ಮಾಡಿಸಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ನೆಲಮಂಗಲ ಮತ್ತು ಕೊರಟಗೆರೆಯಲ್ಲಿರುವ ಲೋಕೋಪಯೋಗಿ ಇಲಾಖೆ ರಸ್ತೆ ವಿವರ ಕೆಳಕಂಡಂತಿದೆ:–

ತಾಲ್ಲೂಕು	ರಾಜ್ಯ ಹೆದ್ದಾರಿ	ಜಿಲ್ಲಾ ಮುಖ್ಯ ರಸ್ತೆ	ಒಟ್ಟು
ನೆಲಮಂಗಲ	30.00	104.00	134.00
ಕೊರಟಗೆರೆ	40.10	169.60	209.70
	70.10	273.60	343.70

ಆ) ಇವುಗಳಲ್ಲಿ 294.40 ಕಿಮೀ. ರಸ್ತೆಗಳು ಬಸ್ ಸಂಚಾರಕ್ಕೆ ಯೋಗ್ಯವಾಗಿವೆ.

ಇ) 1993–94ನೇ ಸಾಲಿನಲ್ಲಿ ಅನುದಾನ ಲಭ್ಯತೆಯನ್ನು ಅನುಸರಿಸಿ, ಉಳಿದ 49.30 ಕಿಮೀ. ರಸ್ತೆಯನ್ನು ಸಂಚಾರಕ್ಕೆ ತೊಂದರೆ ಉಂಟಾಗದಂತೆ ನಿರ್ವಹಿಸಲಾಗುವುದು.

ಮೂಡಬಿದರೆ ಏತ ನೀರಾವರಿ ಕುರಿತು

1172: ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ):– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೂಡಬಿದರೆ ಜಂಗರಗುಂಡಿ ಏತ ನೀರಾವರಿಯಿಂದ ನೀರಾವರಿಯಾಗುವ ಜಮೀನಿನ ವಿಸ್ತೀರ್ಣವೆಷ್ಟು; ಫಲಾನುಭವಿಗಳ ಸಂಖ್ಯೆ ಎಷ್ಟು;

ಆ) ಈ ಯೋಜನೆಗೆ ಪ್ಲಾನ್ ಮತ್ತು ಅಂದಾಜು ತಯಾರಿಸಲಾಗಿದೆಯೇ; ಹಾಗೂ ಯೋಜನಾ ವೆಚ್ಚವೆಷ್ಟು;

ಇ) ಈ ಯೋಜನೆಯನ್ನು ಕಾರ್ಯಗತಗೊಳಿಸಲಾಗುವುದು ಯಾವಾಗ;

ಈ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೀರಾವರಿ ಬಗ್ಗೆ ಬಹಳ ಕಮ್ಮಿ ಹಣ ವಿರ್ಚಾಗುವುದರಿಂದ ಈ ಯೋಜನೆಯನ್ನಾದರೂ ಸರ್ಕಾರವು ಬೇಗನೆ ಕಾರ್ಯಗತಗೊಳಿಸುವುದೆ ?

ಡಾ. ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) 64.37 ಹೆಕ್ಟೇರ್: ಫಲಾನುಭವಿಗಳ ಸಂಖ್ಯೆ: 68.

ಆ) ತಯಾರಿಸಲಾಗಿದೆ. ಅಂದಾಜು ವೆಚ್ಚ ರೂ.23.61 ಲಕ್ಷ.

ಇ) ಯೋಜನೆಯು ಆರ್ಥಿಕವಾಗಿ ಶಕ್ಯವಾಗಿಲ್ಲವಾದ ಕಾರಣ ಇದನ್ನು ಪುನಃ ಪರಿಶೀಲಿಸಲಾಗುತ್ತಿದೆ.

ಈ) ಇದು ಯೋಜನೆಯ ಶಕ್ಯತೆಯನ್ನು ಅವಲಂಬಿಸಿದೆ.

ಅಧಿಕ ವಿದ್ಯುತ್ ಪಡೆಯುವ ಖಾಸಗಿ ಕಾರ್ಖಾನೆಗಳು

1262: ಶ್ರೀ. ಕೆ. ಹರ್ಷಕುಮಾರ ಗೌಡ (ಚಾಮರಾಜ):– ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಅತ್ಯಧಿಕ ಪ್ರಮಾಣದ ವಿದ್ಯುಚ್ಛಕ್ತಿ ಪಡೆಯುವ ಖಾಸಗೀ ಕೈಗಾರಿಕೆಗಳೆಷ್ಟು;

ಆ) ಮೈಸೂರು ನಗರದ ಐಡಿಯಲ್ ಜಾವಾ ಕಾರ್ಖಾನೆಗೆ ವಿತರಣೆ ಮಾಡುವ ವಿದ್ಯುಚ್ಛಕ್ತಿಯ ಪ್ರಮಾಣದಲ್ಲಿ ಕೊರತೆ ಮಾಡಲು ಕಾರಣವೇನು;

ಇ) ಈ ಕೊರತೆಯ ಪ್ರಮಾಣವನ್ನು ಯಾವಾಗ ಸರಿಪಡಿಸಲಾಗುವುದು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):–

ಅ) 10,000 ಕೆವಿಎ ಮತ್ತು ಅದಕ್ಕೂ ಮೇಲ್ಪಟ್ಟು ಕಂಟ್ರಾಕ್ಟ್ ಡಿಮ್ಯಾಂಡ್‌ವುಳ್ಳ ಬೃಹತ್ ಖಾಸಗಿ ಕೈಗಾರಿಕೆಗಳ ಸಂಖ್ಯೆ: 20

ಆ) ರಾಜ್ಯ ಅನುಭವಿಸುತ್ತಿರುವ ವಿದ್ಯುತ್ ಕೊರತೆಯನ್ನು ಭಾಗಶಃ ತುಂಬಲು 251 ಕೆವಿಎ ಮತ್ತು ಅದಕ್ಕೂ ಮೇಲ್ಪಟ್ಟು ಕಂಟ್ರಾಕ್ಟ್ ಡಿಮಾಂಡ್ ಉಳ್ಳ ಹೆಚ್.ಟಿ. ಕೈಗಾರಿಕೆಗಳಿಗೆ ಶೇ. 40 ರಿಂದ ಶೇ. 60ರವರೆಗೆ ವಿದ್ಯುತ್ ಕಡಿತವನ್ನು ವಿಧಿಸಲಾಗಿದೆ. ಸದ್ಯದ ಕ್ಲಿಷ್ಟಕರ ವಿದ್ಯುತ್ ಪರಿಸ್ಥಿತಿಯಲ್ಲಿ ಇದು ಅನಿವಾರ್ಯವೂ ಆಗಿದೆ. ಆದಾಗ್ಯೂ ಐಡಿಯಲ್ ಜಾವಾ ಕಾರ್ಖಾನೆಯು 'ರೋಗಗ್ರಸ್ತ' ಕೈಗಾರಿಕೆಯೆಂದು ಘೋಷಿತವಾಗಿರುವುದರಿಂದ, ಬೇರೆ ಕೈಗಾರಿಕೆಗೆ ವಿಧಿಸಲಾಗುವ ವಿದ್ಯುತ್ ಕಡಿತದ ಅರ್ಧದಷ್ಟನ್ನು ಮಾತ್ರ ಈ ಕಾರ್ಖಾನೆಗೆ ವಿಧಿಸಲಾಗುತ್ತಿದ್ದು, ವಿದ್ಯುತ್ ಕಡಿತದ ಬಗ್ಗೆ ಸಾಕಷ್ಟು ರಿಯಾಯ್ತಿನ್ನು ನೀಡಲಾಗುತ್ತಿದೆ.

ಇ) ಮುಂಗಾರು ಮಳೆಯ ತಿಂಗಳುಗಳಲ್ಲಿ ರಾಜ್ಯದ ವಿದ್ಯುತ್ ಪರಿಸ್ಥಿತಿಯಲ್ಲಿ ಉಂಟಾಗಬಹುದಾದ ಸುಧಾರಣೆಯನ್ನು ಅವಲೋಕಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು.

ಕಾವೇರಿ ಮತ್ತು ಕೃಷ್ಣಾ ಬೇಸಿನ್ ಯೋಜನೆ

1664: ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ):– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಾವೇರಿ ಮತ್ತು ಕೃಷ್ಣಾ ಬೇಸಿನ್‌ಗಳ ಏತ ನೀರಾವರಿ ಕಾರ್ಪೋರೇಷನ್‌ಗಳನ್ನು ಸ್ಥಾಪನೆ ಮಾಡಿದಂದಿನಿಂದ ಇಲ್ಲಿಯವರೆಗೆ ಎಷ್ಟು ಯೋಜನೆ ಕೈಗೆತ್ತಿಕೊಳ್ಳಲಾಗಿದೆ;

ಆ) ಇಲ್ಲಿಯವರೆಗೆ ಎಷ್ಟು ಹಣ ಖರ್ಚು ಮಾಡಲಾಗಿದೆ ?

ಡಾ. ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) ಕಾವೇರಿ ಜಲಾನಯನ ಏತ ನೀರಾವರಿ ನಿಗಮವು 17 ಯೋಜನೆಯನ್ನು ಹಾಗೂ ಕೃಷ್ಣಾ ಜಲಾಯನ ಏತ ನೀರಾವರಿ ನಿಗಮವು 8 ಯೋಜನೆಗಳನ್ನು ಕೈಗೆತ್ತಿಕೊಂಡಿದೆ.

ಆ) ಫೆಬ್ರವರಿ 93ರವರೆಗೆ ಕಾಮಗಾರಿಗಳಿಗಾಗಿ ಮಾಡಿದ ಖರ್ಚು ಲಕ್ಷ ರೂ.ಗಳಲ್ಲಿ ಈ ಕೆಳಕಂಡಂತಿದೆ.